ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 7th April 1969.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Completion of Lift Irrigation Scheme work near Tore Bommanahalli

327. Sri N. HUTCHMASTHY GOWDA (Huliyurdurga).—

Will the Minister for Revenue be pleased to state :—

(*a*) the expenditure incurred towards lift irrigation scheme undertaken near Tore Bommanahalli, Kunigal Taluk in connection with the famine relief work ;

(*b*) the extent of land that will be benefited by the same ;

(*c*) the estimated cost of the same ;

(*d*) whether arrangement has been made for the completion of said work as per the estimate ;

(*e*) if so, the measures taken now ?

Sri H. V. KOUJALGI (Minister for Revenue).—

(*a*) Rs. 4,000.

(*b*) 270 Acres.

(*c*) Rs. 25,500.

(*d*) Yes.

(*e*) An additional estimate for Rs. 14,600 has been prepared for the completion of the said scheme.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ಪಾಮಿ, ನನಗೆ ಗೊತ್ತಿರುವ ಪ್ರಕಾರ 19 ಸಾವಿರ ರೂಪಾಯಿ ಖರ್ಚಾಗಿದೆ. ಆದರೆ ಉತ್ತರದಲ್ಲಿ 4 ಸಾವಿರ ಮಾತ್ರ ಖರ್ಚಾಗಿದೆಯೆಂದಿದೆ. ಇದು ಯಾವ ಬಾಬಿಗೆ ಖರ್ಚಾಗಿದೆ ?

ಶ್ರೀ ಎಚ್. ವಿ. ಕೌಜಲಗಿ.—ನಮಗೆ ತಿಳಿಸಿರುವ ಪ್ರಕಾರ 4 ಸಾವಿರ ಮಾತ್ರ ಖರ್ಚಾಗಿದೆ, ಯಾವ ಬಾಬಿಗೆ ಖರ್ಚಾಗಿದೆ ಎಂಬ ವಿವರ ನನ್ನಲ್ಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ 14,600 ರೂಪಾಯಿಗಳ ಅಂದಾಜೇನು ಮಾಡಲಾಗಿದೆ ಅದರ ಪ್ರಕಾರ ಈ ವರ್ಷವೇ ಕೆಲಸಮಾಡಿ ಅಚ್ಚುಕಟ್ಟುಮಾಡಲು ಸರಕಾರ ಪ್ರಯತ್ನಮಾಡುವುದೇ ?

ಶ್ರೀ ಎಚ್. ವಿ. ಕೌಜಲಗಿ.—ಈ ಫೈಲನ್ನು ವ್ಯವಸಾಯ ಇರಾಖೆಯಿಂದ ಪಿ.ಡಬ್ಲ್ಯು.ಡಿ. ಇರಾಖೆಗೆ ಕಳಿಸಿದೆ, ಇನ್ನೂ ಬಂದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—1965 ನೆಯ ಇಸವಿಯಲ್ಲಿ ಮಂತ್ರಿಗಳೊಬ್ಬರು ಇದರ ಪ್ರಾರಂಭೋತ್ಸವ ನಡೆಸಿದರು, ಈಗ 19 ಸಾವಿರ ಖರ್ಚಾಗಿದೆ, ಅಲ್ಲಿ ಪಂಪುಸೆಟ್ಟು, ಮೋಟಾರು, ಪೈಪುಗಳು ಮುಂತಾದ್ದೆಲ್ಲಾ ಹಾಳಾಗಿಹೋಗುತ್ತಿದೆ. ಆದರೂ ಕೂಡ ಸರಕಾರ ಈ ಕೆಲಸ ಪೂರ್ಣಮಾಡದಿರಲು ಕಾರಣವೇನು ? ಪಬ್ಲಿಕ್ ವರ್ಕ್ಸ್ ಇರಾಖೆಯವರಾಗಲಿ ಅಥವಾ ಇತರರಾಗಲಿ ಈ ಕೆಲಸವನ್ನು ಬೇಗ ಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ತಕ್ಷಣ ನೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ರಿಲೀಫ್ ಕಾಮಗಾರಿ ಕೆಲಸ ಅರ್ಧವಾಗಿರುವುದನ್ನು ಪೂರ್ಣ ಮಾಡುವುದಾಗಿ ಪದೇಪದೇ ಈ ಸಭೆಯಲ್ಲಿ ಹೇಳುತ್ತಿದ್ದೀರಿ. ಹಾಗಿರುವಾಗ ತಕ್ಷಣ ಈ ಕೆಲಸ ಪೂರ್ಣಮಾಡಲು ಏಕೆ ಕ್ರಮ ತೆಗೆದುಕೊಂಡಿಲ್ಲ ?

Sri H. V. KOUJALGI.—With due respect I may submit that this question may not arise. This question refers to irrigation project in a particular area.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಆಹಾರದ ಅಭಾವವಿರುವಾಗ 27 ಸಾವಿರ ಎಕರೆ ನೀರಾವರಿಯಾಗುವ ಈ ಕೆಲಸವನ್ನು ಜಾಗ್ರತೆ ಮುಗಿಸುತ್ತೀರಾ ?

Sri H. V. KOUJALGI.—Steps will be taken immediately.

Mr. SPEAKER.—It is 270 acres and not 27,000 acres.

Sri M. H. JAYAPRAKASH NARAYAN.—In Kannada it is stated as 27,000 acres.

Sri H. V. KOUJALGI.—It is wrong. The correct answer is 270 acres.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದನ್ನು ಫ್ಯಾಮಿನ್ ರಿಲೀಫ್ ಕೆಲಸದಲ್ಲಿ 1965 ರಲ್ಲಿ ತೆಗೆದುಕೊಳ್ಳರಾಯಿತು. ಆಮೇಲೆ ಮೋಟಾರು, ಪಂಪುಸೆಟ್ಟು ವಗೈರೆ ತೆಗೆದುಕೊಳ್ಳಲು ಅಗ್ರಿ ಕಲ್ಚರಲ್ ಹೆಡ್ಡಿಗೆ ವರ್ಗಾಯಿಸಿದ್ದಾರೆ. ಈಗ ಫ್ಯಾಮಿನ್ ರಿಲೀಫ್ ಫಂಡಿನಿಂದ ಅಥವ ಪಿ.ಡಬ್ಲ್ಯು.ಡಿ. ನಿಂದ ತೆಗೆದುಕೊಂಡು ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗ ಪಬ್ಲಿಕ್ ವರ್ಕ್ಸ್ ಇರಾಖೆಯಿಂದ ಕೆಲಸ ಮುಗಿಸರಾಗುವುದು.

Sri M. MALLAPPA.—I have been authorised to put this question No. 437.

Mr. SPEAKER.—We have not received any letter. Question No. 571. I have received a telegram from the Hon. Minister for Food requesting that this question may be taken up tomorrow. So Question No. 571 is held over. Next question.